150 ಶ್ರೀ.ಸಿದ್ದು ಸವದಿ (ತೆರದಾಳ್)
ಹೆಚ್.ಹಾಲಪ್ಪ(ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ರಾಜ್ಯದಲ್ಲಿ ಬಿ.ಪಿ.ಎಲ್/ ಎ.ಪಿ.ಎಲ್. ಪಡಿತರ ಚೀಟಿಗಳನ್ನು ಈಗಾಗಲೇ ನೀಡಿರುವ ಸಂಖ್ಯೆ ಎಷ್ಟು; ಅವುಗಳಲ್ಲಿ ತಾತ್ಕಾಲಿಕ ಪಡಿತರ ಚೀಟಿಗಳೆಷ್ಟು;

ರಾಜ್ಯದಲ್ಲಿ ಜೂನ್ 2009ರ ಮಾಹೆಯ ಅಂತ್ಯದವರೆಗೆ ಬಿಪಿಎಲ್/ಎಪಿಎಲ್ ಮತ್ತು ನೆಮ್ಮದಿ ಕಾರ್ಡುಗಳು ಸೇರಿದಂತೆ ಒಟ್ಟು 1,59,66,366 ಪಡಿತರ ಚೀಟಿಗಳನ್ನು ವಿತರಿಸಲಾಗಿದೆ. ಇದರಲ್ಲಿ 5,90,363 ಖಾಯಂ ಪಡಿತರ ಚೀಟಿಗಳನ್ನು ಹೊರತುಪಡಿಸಿ, ತಾತ್ಕಾಲಿಕ ಪಡಿತರ ಚೀಟಿಗಳ ಸಂಖ್ಯೆ:1,53,76,003.

ಆ) ಪ್ರತಿ ಪಡಿತರ ಚೀಟಿಗೆ ನೀಡುವ ಧಾನ್ಯಗಳ ಪ್ರಮಾಣ ಎಷ್ಟು;

ಪ್ರತಿ ಪಡಿತರ ಚೀಟಿಗಳಿಗೆ ನೀಡುವ ಆಹಾರಧಾನ್ಯಗಳ ಪ್ರಮಾಣ ಈ ಕೆಳಕಂಡಂತ್ತಿರುತ್ತದೆ.

ಪಡಿತರ ಚೀಟಿಯ ವಿಧ	ಅಕ್ಕಿ	ಗೋಧಿ/ರಾಗಿ	ಸಕ್ಕರೆ
	ಪ್ರಮಾಣ (ಕೆಜಿ)	ಪ್ರಮಾಣ (ಕೆಜಿ)	ಪ್ರಮಾಣ (ಕೆಜಿ)
ಎಎವೈ	29	6	1
ಸಕ್ಷಯ (ಬಿಪಿಎಲ್)	ಪ್ರತಿ ವ್ಯಕ್ತಿಗೆ 4 ಕೆಜಿಯಂತೆ ಗರಿಷ್ಟ 20ಕೆಜಿ	ಪ್ರತಿ ವ್ಯಕ್ತಿಗೆ 1 ಕೆಜಿಯಂತೆ ಗರಿಷ್ಟ 3ಕೆಜಿ	1

ಸೀಮೆಎಣ್ಣೆ	ಪ್ರಮಾಣ (ಲೀ)
ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	7
ಉಳಿದ ಅನೌಪಚಾರಿಕ ಪಡಿತರ ಪ್ರದೇಶ	5
ಪಟ್ಟಣ ಪ್ರದೇಶ	4
ಗ್ರಾಮಾಂತರ ಪ್ರದೇಶ	3

ಇ) ಪಡಿತರ ಚೀಡಿ ನೀಡುವ ಯೋಜನೆ ಇನ್ನು ಇದೆಯೇ; ಹಾಗಿದ್ದಲ್ಲಿ, ಯಾವಾಗ ನೀಡಲಾಗುವುದು;

ಹೌದು.

ಇದು ನಿರಂತರ ಪ್ರಕ್ರಿಯೆ ಆಗಿರುತ್ತದೆ.

ಈ) ತಾತ್ಕಾಲಿಕ ಪಡಿತರ ಚೀಟಿಗಳನ್ನು ಸಮೀಕ್ಷೆ ಮಾಡಲಾಗುವುದೇ; ಹಾಗಿದ್ದಲ್ಲಿ, ಯಾವಾಗ ಮಾಡಲಾಗುವುದು;

ಇಲ್ಲ.

ಅನ್ವಯಿಸುವುದಿಲ್ಲ.

ಉ) ಪಡಿತರ ಚೀಟಿ ಸಂಖ್ಯೆ ಹೆಚ್ಚಾಗಿರುವ ಕಾರಣ, ಫಲಾನುಭವಿಗಳಿಗೆ ತ್ವರಿತವಾಗಿ ಆಹಾರಧಾನ್ಯ ಪಡೆಯಲು ಹೊಸ ಪಡಿತರ ಅಂಗಡಿಗಳನ್ನು ತೆರೆಯುವ ವಿಚಾರ ಸರ್ಕಾರದ ಮುಂದಿದೆಯೇ; ಯಾವಾಗ ಪಡಿತರ ಅಂಗಡಿಗಳನ್ನು ತೆರೆಯಲಾಗುವುದು (ವಿವರ ನೀಡುವುದು)

ಇದೆ.

ಸಾರ್ವಜನಿಕ ವಿತರಣಾ ಪದ್ಧತಿ (ನಿಯಂತ್ರಣ) ಆದೇಶ 1992 ರ ಪ್ರಕಾರ ಅಧಿಕೃತ ಪ್ರಾಧಿಕಾರ (Authorized Authority) ತಮ್ಮ ವ್ಯಾಪ್ತಿಯಲ್ಲಿ ಪಡಿತರ ಅಂಗಡಿಗಳನ್ನು ತೆರೆಯುವ ಅವಶ್ಯಕತೆ ಕಂಡು ಬಂದಲ್ಲಿ ಪ್ರಕಟಣೆ ಹೊರಡಿಸಿ ನ್ಯಾಯಬೆಲೆ ಅಂಗಡಿಗಳನ್ನು ಹೆಚ್ಚಿಸುವ ಬಗ್ಗೆ ಕ್ರಮ ಕೈಗೊಳ್ಳುತ್ತಾರೆ.

151 ಶ್ರೀ ಸಿದ್ದು ಸವದಿ
ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು

ಅ) 2009–10ನೇ ಸಾಲಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಕೈಗೊಂಡ ಕಾರ್ಯಕ್ರಮಗಳು ಯಾವುವು;

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಕೈಗೊಂಡ ಕಾರ್ಯಕ್ರಮಗಳ ಪಟ್ಟಿಯನ್ನು ಅನುಬಂಧ1 ರಲ್ಲಿ ಒದಗಿಸಿದೆ.

ಆ) ಈ ಇಲಾಖೆಯಿಂದ ನಡೆಸುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು; ಹಾಗಿದ್ದಲ್ಲಿ, ತೇರದಾಳ ಮತಕ್ಷೇತ್ರದಲ್ಲಿರುವ ಅಂಗನವಾಡಿ ಕೇಂದ್ರಗಳೆಷ್ಟು;

ರಾಜ್ಯದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ 54260 ಅಂಗನವಾಡಿ ಕೇಂದ್ರ ಹಾಗೂ 405 ಮಿನಿ ಅಂಗನವಾಡಿ ಕೇಂದ್ರಗಳನ್ನು ನಡೆಸಲಾಗುತ್ತಿದೆ. 3ನೇ ಹಂತದಲ್ಲಿ ರಾಜ್ಯಕ್ಕೆ 5786 ಅಂಗನವಾಡಿ ಕೇಂದ್ರ ಹಾಗೂ 2926 ಮಿನಿ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡಲಾಗಿದೆ.
ತೇರದಾಳ್ ಮತ ಕ್ಷೇತ್ರಗಳಲ್ಲಿ ಬರುವ ಅಂಗನವಾಡಿ ಕೇಂದ್ರಗಳ ವಿವರ ಕೆಳಕಂಡಂತಿದೆ.

ತಾಲ್ಲೂಕು	ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಕೇಂದ್ರಗಳು	ಪ್ರಸಕ್ತ ಸಾಲಿನಲ್ಲಿ ಕಾರ್ಯರಂಭಗೊಳ್ಳಲಿರುವ ಕೇಂದ್ರಗಳು	
		ಅಂಗನವಾಡಿ	ಮಿನಿ.ಅಂಗನವಾಡಿ